**Code No. 10 X(A)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಮಾನವ, ದೇವಮಾನವ ಸಂಬಂಧಗಳ ವಿಷಯದಲ್ಲಿರುವ ಪ್ರೀತಿಯೆಂಬುದು ಮೂಲಧಾತುವಾಗಿದ್ದು ಅದು ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಂಡು ಅವರನ್ನು ಬೆಸೆದಿರುವುದನ್ನು ಕಾಣಬಹುದು. ಪ್ರೀತಿಯೇ ತಾಯಿ ಮಗುವಿನ ನಡುವೆ ಅಕ್ಕರೆಯೆಂದು, ಗಂಡು ಹೆಣ್ಣುಗಳ ನಡುವೆ ಪ್ರೇಮವೆಂದು, ದೇವ ಜೀವರ ನಡುವೆ ಭಕ್ತಿಯೆಂದು ಕರಿಯಲ್ಪಡುತ್ತದೆ. ಪ್ರೀತಿಯ ಈ ಒಂದೊಂದು ಮುಖವೂ ತನ್ನದೇ ಆದ ವೈಶಿಷ್ಟ್ಯಗಳಿಂದ ನಮ್ಮ ಗಮನ ಸೆಳೆಯುತ್ತದೆ. ಅದರಲ್ಲೂ ತಾಯಿ ಮಗುವಿನ ನಡುವಿನ ಅಂತಃಕರಣವು ಚಿಂತನೀಯವಾದದ್ದು. ತಾಯಿಕರುಳಿನ ಸ್ಪಂದನವು ಮಾನವರಲ್ಲಿ ಅಷ್ಟೇಕೆ, ಪ್ರಾಣಿ ಪಕ್ಷಿಗಳಲ್ಲೂ ಪ್ರಬಲವಾಗಿರುವುದನ್ನು ನಾನು ಕಾಣಬಹುದಾಗಿದೆ.

ಮಗುವನ್ನು ತನ್ನ ಗರ್ಭದಲ್ಲಿ ನಿರ್ದಿಷ್ಟ ಕಾಲದವರೆಗೆ ಹೊತ್ತು, ತಾನು ತಿನ್ನುವ ಆಹಾರ ಸತ್ವದ ಒಂದು ಪಾಲನ್ನು ಅದರ ಪೋಷಣೆಗೆ ನೀಡುತ್ತಾ ದಿನ ತುಂಬಿದಾಗ ಹೆತ್ತು. ಆನಂತರವೂ ಎದೆ ಹಾಲು ಕೊಟ್ಟು ಅಥವಾ ಗುಟುಕು ಕೊಟ್ಟು ಮಕ್ಕಳ ಪೋಷಿಸುವ ಹೆಣ್ಣು ಜನ್ಮ ಸೃಷ್ಟಿಕ್ರಿಯೆಗೆ ಮಾಡುವ ಉಪಕಾರ ಬೆಲೆ ಕಟ್ಟಲಾಗದ್ದು, ಹಡೆದ ತಾಯಿ ಮಗುವಿಗೆ ಹಾಲುಣಿಸಿ, ಅನ್ನ ತಿನ್ನಿಸಿ ಅದರ ದೇಹವನ್ನಷ್ಟೇ ಬೆಳೆಸುವುದಿಲ್ಲ. ತನ್ನ ಮಗು ಏನಾಗಬೇಕು ಎಂಬ ಬಗ್ಗೆ ಕನಸು ಕಾಣುತ್ತಾಳೆ. ಬದುಕಿನಲ್ಲಿ ಯಾವುದನ್ನು ಮಾಡಬೇಕು, ಮಾಡಬಾರದು ಎಂಬುದನ್ನು ತಿಳಿ ಹೇಳಿ ಅವನ ಬದುಕನ್ನು ರೂಪಿಸುವ ರೂವಾರಿಯೂ ಆಗುತ್ತಾಳೆ. ಕೂಸಾದ ಮೇಲೂ ತನ್ನ ಇನ್ನೊಂದು ಹೊಟ್ಟೆ ಚೀಲದಲ್ಲಿ ಮರಿಯನ್ನಿಟ್ಟು ಪೋಷಿಸುವ

[ Turn over

ಕಾಂಗರೋ, ಮರಿಯನ್ನು ಹೊತ್ತು ಸಾಗುವ ಕೋತಿ, ಮೊದಲಾದ ಪ್ರಾಣಿಗಳು ತಾಯ್ತನದ ಹಿರಿಮೆಗೆ ಉದಾಹರಣೆಗಳಾಗಿವೆ. ಚೇಳು ಬಸಿರಾಯಿತೆಂದರೆ ಅದರ ಆಯುಷ್ಯ ಮುಗಿಯಿತೆಂದೇ ಅರ್ಥ. ಗರ್ಭದಲ್ಲಿರುವ ಮರಿಗಳು ಅದರ ಬೆನ್ನು ಸೀಳಿಕೊಂಡು ಹುಟ್ಟುತ್ತವೆ ಎನ್ನುತ್ತಾರೆ. ತಾಯಿ ಚೇಳಿನ ತ್ಯಾಗ ಎಷ್ಟು ದೊಡ್ಡದು. ಸಂತತಿಗಾಗಿ ತನ್ನ ಜೀವವನ್ನೇ ಬಲಿಕೊಡುವ ತ್ಯಾಗಜೀವಿ ಅದು. ತಾಯ್ತನವು ಎಂಥೆಂತ ತ್ಯಾಗ ಬಲಿದಾನಗಳ ಬೆಲೆ ಕೇಳುತ್ತದೆ ಎಂದು ತಿಳಿದು ಆಶ್ಚರ್ಯವಾಗುತ್ತದೆ.

ತಾಯಿ ಮಗುವಿನ ಸಂಬಂಧ ಕುರಿತು ಆಲೋಚಿಸುವಾಗ ಹಿಮಾಲಯದ ಮಾನಸ ಸರೋವರ, ಬಳಿ ಇರುವ ಒಂದು ಪಕ್ಷಿಯ ಜೀವನ ಕ್ರಮ ಜ್ಞಾಪಕಕ್ಕೆ ಬರುತ್ತದೆ. ಆ ಪಕ್ಷಿಯನ್ನು ಓಂ ಪಕ್ಷಿ ಎನ್ನುತ್ತಾರೆ. ಆ ಪಕ್ಷಿಗೆ ಗೂಡೆಂಬುದೇ ಇಲ್ಲ. ಅದು ಎಲ್ಲೂ ಕೂರುವುದಿಲ್ಲ. ಸದಾ ಹಾರುತ್ತಲೇ ಇರುತ್ತದೆ. ಅದರ ಸಕಲ ವ್ಯವಹಾರವು ಆಕಾಶದಲ್ಲೇ. ನಿದ್ದೆ, ಮೈಥುನ, ಕುಟುಂಬ ಜೀವನ, ಎಲ್ಲಾ ಅಂತರಿಕ್ಷದಲ್ಲೇ. ಆ ಹಕ್ಕಿ ಗರ್ಭವಾಗಿ ಪ್ರಸವದ ಸನ್ನಿವೇಶ ಬಂದಾಗಲೂ ಹಾರಾಡುತ್ತಲೇ ಅದು ಮೊಟ್ಟೆ ಹಾಕುತ್ತದೆ. ಮೊಟ್ಟೆಯು ಕೆಳಕ್ಕೆ ಬೀಳುತ್ತಿರುವಾಗ ಮಿಂಚಿನ ವೇಗದಲ್ಲಿ ಬಂದು ಅದನ್ನು ಒಡೆದು ಮರಿಯನ್ನು ಕಚ್ಚಿಕೊಂಡು ಗಗನಕ್ಕೆ ಏರುತ್ತದೆ, ಕೆಳಕ್ಕೆ ಬೀಳುವುದು ಆ ಮೊಟ್ಟೆಯ ಕವಳ ಮಾತ್ರ, ಎಂಥ ಬೆಸುಗೆ ತಾಯಿ ಮರಿಯದು.